CC No.3713/2021
PW-1

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
ಸಾಕ್ಷಿಯನ್ನು ದಿನಾಂಕ- 30.06.2026 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಹೆಚ್.ಎಮ್.ಎಮ್ ವಕೀಲರಿಂದಃ

1. ನಾನು ಪಿ.ಯು.ಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಮತ್ತು ಬರೆಯಲು ಬರುತ್ತದೆ. ನಾನು ವ್ಯವಸಾಯ ಮತ್ತು ವ್ಯಾಪಾರ ಮಾಡಿಕೊಂಡಿರುತ್ತೇನೆ. ನಾನು ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಮರ್ಲಾನಹಳ್ಳಿ ಇದರಲ್ಲಿ ಪಾಲುದಾರನಾಗಿರುತ್ತೇನೆ. ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಇದು ರೈಸ್‌ಮಿಲ್ ಆಗಿರುತ್ತದೆ. ಅದರಲ್ಲಿ ಭತ್ತವನ್ನು ಖರೀದಿ ಮಾಡುತ್ತೇವೆ ಹಾಗೂ ಮಾರಾಟ ಸಹಿತ ಮಾಡುತ್ತೇವೆ. ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಇದರ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡುತ್ತೇವೆ. ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಇದರಲ್ಲಿ ನನಗೆ ವರ್ಷಕ್ಕೆ 4-5 ಲಕ್ಷ ಲಾಭ ಬರುತ್ತದೆ. ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಗೆ 2017-18 ರಿಂದ ಸಂಬಂಧಪಟ್ಟಂತೆ ನಾನು ನನ್ನ ಐ.ಟಿ ರಿಟರ್ನ್ಸ್ ಫೈಲು ಮಾಡುತ್ತೇನೆ. ನಾನು ವೈಯಕ್ತಿಕವಾಗಿ 2012 ರಿಂದ ಐ.ಟಿ ರಿಟರ್ನ್ಸ್ ಫೈಲು ಮಾಡುತ್ತೇನೆ. ನನ್ನ ಹೆಸರಿನಲ್ಲಿ 25 ಎಕರೆ ಜಮೀನು ಇದೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ವೆಂಕಟಲಕ್ಷ್ಮೀ ಇಂಡಸ್ಟ್ರಿಸ್ ಸಂಬಂಧಪಟ್ಟಂತೆ ಐ.ಟಿ ರಿಟರ್ನ್ಸ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಐ.ಟಿ ರಿಟರ್ನ್ಸ್ ಸಲ್ಲಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ಜಮೀನಿನಲ್ಲಿ ಭತ್ತ ಬೆಳೆಯುತ್ತೇವೆ. 2019-20 ನೇ ಸಾಲಿನಲ್ಲಿ ನಮ್ಮ ಜಮೀನಿನಿಂದ ಸುಮಾರು 6-7 ಲಕ್ಷ ಆದಾಯ ಬಂದಿರುತ್ತದೆ. ನನ್ನ ಮುಖ್ಯ ದೂರಿನಲ್ಲಿ, ನೋಟಿಸನಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಆರೋಪಿಗೆ ದಿನಾಂಕಃ 12-01-2020 ರಂದು ರೂ.15,00,000/- ಗಳನ್ನು ಸಾಲ ನೀಡಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಆ ದಿನ ನಾನು ನಗದು ರೂಪದಲ್ಲಿ ಸಾಲವನ್ನು ನೀಡಿರುತ್ತೇನೆ.

ದೂರಿನಲ್ಲಾಗಲಿ, ನೋಟಿಸ್‌ನಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲೀ ನಗದು ರೂಪದಲ್ಲಿ ಹಣ ನೀಡಿದ್ದೇನೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಹಣದಲ್ಲಿ ರೂಪದಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕಃ 12-01-2020 ರ ಪೂರ್ವದಲ್ಲಿ ರೂ.15,00,000/- ವಿತ್ ಡ್ರಾ ಮಾಡಿಕೊಂಡ ಬಗ್ಗ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಒಕ್ಕಲುತನದಿಂದ ಬಂದ ಆದಾಯವು ಮನೆಯಲ್ಲೇ ಇಟ್ಟುಕೊಂಡಿದ್ದರಿಂದ ವಿತ್ ಡ್ರಾ ಮಾಡುವ ಪರಿಸ್ಥಿತಿ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ರೂ.15,00,000/- ಕೊಟ್ಟ ಬಗ್ಗ ನಿಮ್ಮ 2020-2021 ನೇ ಸಾಲಿನಲ್ಲಿ ಐ.ಟಿ ರಿಟರ್ನ್ಸ್‌ನಲ್ಲಿ ನಮೂದು ಮಾಡಿದ್ದೀರಿಯೇ ಎಂದರೆ ಸಾಕ್ಷಿಯು ನಾನು ಕೃಷಿ ಆದಾಯದಿಂದ ಸಾಲವನ್ನು ನೀಡಿದ್ದು ಐ.ಟಿ.ರಿಟರ್ನ್ಸ್‌ನಲ್ಲಿ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಆರೋಪಿಗೆ ರೂ.15,00,000/- ನಗದು ಸಾಲ ನೀಡದೇ ಇರುವುದರಿಂದ ಐ.ಟಿ.ರಿಟರ್ನ್ಸ್‌ನಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿ-6 ನ್ನು ಯಾವ ದಿನಾಂಕದಂದು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕಃ 12-01-2020 ರಂದೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-6 ನ್ನು ಮಧ್ಯಾಹ್ನ 1.00 ಗಂಟೆಗೆ ಬರೆದುಕೊಟ್ಟಿರುತ್ತಾರೆ. ನಿಪಿ-6 ರಲ್ಲಿರುವ ಸಾಕ್ಷಿದಾರರು ನಿಮ್ಮ ಸಂಬಂಧೀಕರು ಎಂದರೆ ಸಾಕ್ಷಿಯು ಸಂಬಂಧಿಕರಲ್ಲ ಅವರು ನಮಗೂ ಮತ್ತು ಆರೋಪಿತರಿಗೂ ಪರಿಚಯ ಎಂದು ನುಡಿಯುತ್ತಾರೆ. ನಿಪಿ-6 ನ್ನು ಯಾರು ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ಕೆ.ಶಾಂತವೀರ ವಕೀಲರು ಎಂದು ನುಡಿಯುತ್ತಾರೆ. ನಿಪಿ-6 ನ್ನು ತಯಾರಿಸಲು ವಕೀಲರ ಬಳಿ ಆರೋಪಿ ಹಾಗೂ ಅವರ ಗಂಡ ಕರೆದುಕೊಂಡು ಹೋಗಿರುತ್ತಾರೆ. ನಿಪಿ-6 ನ್ನು ಯಾವ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರಾಮೀಸರಿ ನೋಟ್ ಎಂದು ನುಡಿಯುತ್ತಾರೆ. ನಿಪಿ-6 ನ್ನು ಎಷ್ಟು ಸ್ಟ್ಯಾಂಪ

ಪೇಪರ್ ಮೇಲೆ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಆರೋಪಿತರೇ ತಂದಿದ್ದು ಅದು ಒಂದು ರೂಪಾಯಿ ಸ್ಟ್ಯಾಂಪ ಇರಬಹುದು ಎಂದು ನುಡಿಯುತ್ತಾರೆ. ನಿಪಿ-6 ನ್ನು ಗಂಗಾವತಿಯಲ್ಲಿ ತಯಾರು ಮಾಡಿರುತ್ತಾರೆ. ನಿಪಿ-6 ನ್ನು ಗಂಗಾವತಿಯಲ್ಲಿ ತಯಾರಿಸಲಾಗಿದೆ ಎಂದು ಅದರಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಗಂಗಾವತಿಯಲ್ಲಿ ತಯಾರಿಸಲಾಗಿದೆ ಎಂದು ನುಡಿಯುತ್ತಾರೆ. ನಿಪಿ-6 ನ್ನು ಗಂಗಾವತಿಯಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 12-01-2020 ರಂದು ನಿಪಿ-6 ನ್ನು ಬರೆದುಕೊಡುವ ಪೂರ್ವದಲ್ಲಿ ನೀವು ಆರೋಪಿಯ ಸಹಿಯನ್ನು ನೋಡಿದ್ದೀರಿಯೇ ಎಂದರೆ ಸಾಕ್ಷಿಯು ಆ ದಿನ ಅವರು ನಿಪಿ-6 ರಲ್ಲಿ ಸಹಿ ಮಾಡಿದ್ದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕಃ 12-01-2020 ರಲ್ಲಿ ನಿಪಿ-6 ರ ಮೇಲೆ ಆರೋಪಿಯ ಗಂಡನ ಸಹಿ ಯಾಕೆ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಗಂಡ ತನ್ನ ಹೆಂಡತಿಯ ಹೆಸರಿನಲ್ಲಿ ಸಾಲ ಪಡೆಯುವುದಾಗಿ ತಿಳಿಸಿದ ಕಾರಣ ಕೇವಲ ಆರೋಪಿಯ ಸಹಿಯನ್ನು ಮಾತ್ರ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿಯ ಹೆಸರಿನಲ್ಲಿ ಎಲ್ಲಾ ದಾಖಲೆಗಳು ಇರುವುದಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ರೂ.15,00,000/- ಸಾಲವನ್ನು ನಿಪಿ-6 ಕ್ಕೆ ಸಹಿ ಮಾಡಿದ ನಂತರ ನೀಡಿರುತ್ತೇನೆ. ರೂ.15,00,000/- ಸಾಲವನ್ನು ಯಾವ ಮುಖಬೆಲೆಯ ನೋಟ್‌ಗಳಲ್ಲಿ ನೀಡಿದ್ದೀರಿ ಎಂದರೆ ರೂ.500/- ಮುಖಬೆಲೆಯ 30 ಬಂಡಲ್‌ಗಳಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಯಾರು ಎಣಿಕೆ ಮಾಡಿದ್ದರು ಎಂದರೆ ಸಾಕ್ಷಿಯು ಆರೋಪಿಯೇ ಎಣಿಕೆ ಮಾಡಿದ್ದರು ಎಂದು ನುಡಿಯುತ್ತಾರೆ. ರೂ.15,00,000/- ಸಾಲವನ್ನು ಪಡೆದುಕೊಂಡ ಬಗ್ಗೆ ಆರೋಪಿಯು ಯಾವುದಾದರೂ ರಿಸಿಪ್ಟ್ ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ನಿಪಿ-6 ನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ರೂ.20,000/- ಮೇಲ್ಪಟ್ಟ ಹಣವನ್ನು ಬ್ಯಾಂಕಿನ

ಮುಖಾಂತರವೇ ನೀಡಬೇಕೆಂಬ ನಿಯಮದ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನಾನು ಕೃಷಿ ಆದಾಯದಿಂದ ಆ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ಅವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ